ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಅಟಲ್ ಬಿಹಾರಿ ವಾಜಪೇಯಿ ಸಂಕೀರ್ಣ,
ಕೇಂದ್ರಕಛೇರಿ, ಕೆ.ಹೆಚ್.ರಸ್ತೆ, ಶಾಂತಿನಗರ
ಬೆಂಗಳೂರು-560027 : ಭಾರತ
ದೂರವಾಣಿ:080-22537440
ವೆಬ್ ಸೈಟ್:www.mybmtc.in

Bengaluru Metropolitan Transport Corporation
Atal Bihari Vajpeyi Complex
Central Offices, K.H. Road, Shanthinagar,
Bengaluru-560027 : India
Tel: 080-22537440
Website :www.mybmtc.in

ಸಂ:ಬೆಂಮಸಾಸಂ/ಕೇಕ/ಲೆಪ/ವೇತನ/244/2026-27 ದಿ:12.05.2026.

## :ಕಛೇರಿ ಆದೇಶ:

ವಿಷಯ: ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತವನ್ನು ಪಾವತಿಸುವ ಕುರಿತು.
ಉಲ್ಲೇಖ:1.ಸರ್ಕಾರಿ ಆದೇಶ ಟಿಡಿ 12 ಟಿಸಿಬಿ 2023 ದಿ:18.02.2026.
2.ಸರ್ಕಾರಿ ಆದೇಶ ಟಿಡಿ 12 ಟಿಸಿಬಿ 2023 ದಿ:29.04.2026.

******

ಮಾನ್ಯ ಘನ ಸರ್ಕಾರವು ಉಲ್ಲೇಖಿತ ಆದೇಶ 01 ರಡಿಯಲ್ಲಿ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ/ನೌಕರರಿಗೆ ದಿನಾಂಕ: 01.01.2021 ರಿಂದ 28.02.2023 ರವರೆಗೆ ಒಟ್ಟು 26 ತಿಂಗಳ 2020 ರ ವೇತನ ಪರಿಷ್ಕರಣೆ ಹಿಂಬಾಕಿ ಮೊತ್ತ ರೂ.1271.92 ಕೋಟಿಗಳನ್ನು ಪಾವತಿಸಲು ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮುಂದುವರೆದು, ಮಾನ್ಯ ಘನ ಸರ್ಕಾರವು ಉಲ್ಲೇಖಿತ ಆದೇಶ 02 ರಡಿಯಲ್ಲಿ ನಾಲ್ಕು ಸಾರಿಗೆ ನಿಗಮಗಳ ಅಧಿಕಾರಿ/ನೌಕರರ ದಿನಾಂಕ: 01.01.2021 ರಿಂದ 28.02.2023 ರವರೆಗೆ ಒಟ್ಟು 26 ತಿಂಗಳ ವೇತನ ಪರಿಷ್ಕರಣೆ ಹಿಂಬಾಕಿ ಮೊತ್ತ ರೂ.1271.92 ಕೊಟಿಗಳಲ್ಲಿ ಪ್ರಸ್ತುತ ರೂ.450.00 ಕೋಟಿಗಳನ್ನು (ನಾಲ್ಕು ನೂರು ಐವತ್ತು ಕೋಟಿಗಳು ಮಾತ್ರ) ಷರತ್ತುಗಳಿಗೊಳಪಟ್ಟು ನಿಗಮವಾರು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಅದರಂತೆ ಹಂಚಿಕೆಯಲ್ಲಿ ಬೆಮಸಾಸಂಸ್ಥೆಗೆ ಒಟ್ಟು 137.24 ಕೊಟಿಗಳನ್ನು ಬಿಡಿಗಡೆಗೊಳಿಸಿರುತ್ತಾರೆ. ಸದರಿ ಬಿಡುಗಡೆಗೊಳಿಸಿದ ಮೊತ್ತದಲ್ಲಿ ದಿನಾಂಕ. **01.01.2021 ರಿಂದ 30.11.2021** ರವರೆಗೆ 11 ತಿಂಗಳ ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತ ಪಾವತಿಸುವ ವಿಷಯವಾಗಿ ಈ ಕೆಳಗಿನಂತೆ ಕ್ರಮ ವಹಿಸಲು ಆದೇಶಿಸಲಾಗಿದೆ.

1. ಸಂಸ್ಥೆಯ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ 01.01.2021 ರಿಂದ 30.11.2021 ರವರೆಗಿನ 11 ತಿಂಗಳ ವೇತನ ಪರಿಷ್ಕರಣೆ ಹಿಂಬಾಕಿ ಮೊತ್ತವನ್ನು ದಿನಾಂಕ: **19.05.2026** ರಂದು ಪಾವತಿಸುವುದು.
2. ದಿನಾಂಕ: 01.01.2021 ರಿಂದ 30.11.2021 ರವರೆಗಿನ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿ ಸೇವಾ ವಿಮುಕ್ತರಾದ (ನಿವೃತ್ತಿ/ಸ್ವಯಂ ನಿವೃತ್ತಿ/ವಜಾ/ಮರಣ/ರಾಜೀನಾಮೆ ಸೇರಿದಂತೆ) ಎಲ್ಲಾ ಅರ್ಹ ಅಧಿಕಾರಿ/ನೌಕರರಿಗೆ ವೇತನ ಪರಿಷ್ಕರಣೆ ಹಿಂಬಾಕಿ ಮೊತ್ತವನ್ನು ದಿನಾಂಕ: **21.05.2026** ರಂದು ಪಾವತಿಸುವುದು.
3. ದಿನಾಂಕ:01.01.2021 ರಿಂದ 30.11.2021 ರ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿ ಅಂತರ ನಿಮಗ/ಸಂಸ್ಥೆಗಳಿಗೆ ವರ್ಗಾವಣೆಗೊಂಡ ಅಧಿಕಾರಿ/ನೌಕರರ ವೇತನ ಪರಿಷ್ಕರಣೆ ಹಿಂಬಾಕಿ ಮೊತ್ತವನ್ನು ದಿನಾಂಕ:**22.05.2026** ರಂದು ಆಯಾ ನಿಗಮ/ಸಂಸ್ಥೆಗಳಿಗೆ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳುವುದು.

K. B. (ಸಹಿ) 12/05
ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು:
1. ಆಪ್ತ ಕಾರ್ಯದರ್ಶಿ, ಮಾನ್ಯ ಅಧ್ಯಕ್ಷರು, ಬೆಮಸಾಸಂಸ್ಥೆ,ರವರಿಗೆ ಕಳುಹಿಸಲಾಗಿದೆ ಹಾಗೂ ಮಾನ್ಯರ ಗಮನಕ್ಕೆ ತರಲು ಸೂಚಿಸಿದೆ.
2. ಆಪ್ತ ಕಾರ್ಯದರ್ಶಿ, ಮಾನ್ಯ ಉಪಾಧ್ಯಕ್ಷರು,ಬೆಮಸಾಸಂಸ್ಥೆ,ರವರಿಗೆ ಕಳುಹಿಸಿದೆ ಹಾಗೂ ಮಾನ್ಯರ ಗಮನಕ್ಕೆ ತರಲು ಸೂಚಿಸಿದೆ.
3. ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು, ಬೆಮಸಾಸಂಸ್ಥೆ, ರವರ ಮಾಹಿತಿಗಾಗಿ
4. ಆಪ್ತ ಕಾರ್ಯದರ್ಶಿ, ನಿರ್ದೇಶಕರು(ಭ&ಜಾ), ಬೆಂಮಸಾಸಂಸ್ಥೆ, ರವರ ಮಾಹಿತಿಗಾಗಿ.
5. ಎಲ್ಲಾ ಇಲಾಖಾ ಮುಖ್ಯಸ್ಥರು, ಬೆಮಸಾಸಂಸ್ಥೆ, ರವರುಗಳ ಮಾಹಿತಿಗಾಗಿ ಕಳುಹಿಸಿದೆ.
6. ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು/ಕಾರ್ಯವ್ಯವಸ್ಥಾಪಕರು/ಹಿರಿಯ/ಘಟಕ ವ್ಯವಸ್ಥಾಪಕರು/ನಿಲ್ದಾಣಾಧಿಕಾರಿಗಳು, ಬೆಮಸಾಸಂಸ್ಥೆ, ರವರುಗಳ ಮಾಹಿತಿಗಾಗಿ ಮೇಲಿನಂತೆ ಕ್ರಮ ವಹಿಸಲು ಸೂಚಿಸಿದೆ.